# ಕರ್ಮವೊಂದು ಆಧ್ಯಾತ್ಮಿಕ ಸಾಧನೆ

## ಸ್ವಾಮಿ ಭಜನಾನಂದ

(ಹಿಂದಿನ ಸಂಚಿಕೆಯಿಂದ ಮುಂದುವರೆದುದು)

### ಭಗವತ್-ಪ್ರೀತಿ-ಕಾಮ ಕರ್ಮ

ಇದು ಭಗವಂತನನ್ನು ಸಂಪ್ರೀತಗೊಳಿಸುವ ಉದ್ದೇಶದಿಂದ ಮಾಡುವ ಕರ್ಮ. ಇದು ಭಕ್ತರು ಅನುಸರಿಸುವ ಹೆದ್ದಾರಿ. ಇದರಲ್ಲಿ ಭಗವಂತನ ಕೃಪೆ ಹಾಗೂ ಪುರುಷಪ್ರಯತ್ನ ಎರಡೂ ಸಮಾನವಾಗಿ ಮುಖ್ಯವೇ.

ದೇವರನ್ನು ಮೆಚ್ಚಿಸುವ ಈ ಸದುದ್ದೇಶವು ಭಕ್ತಿಯಿಂದ ಜನಿಸುವುದು ಹಾಗೂ ನಾರದರು ಹೇಳುವಂತೆ ಇದರಲ್ಲಿ ಎಲ್ಲ ಆಸೆಗಳನ್ನು ನಿಗ್ರಹಿಸುವುದರಿಂದ ಇದೊಂದು ಆಸೆಯಲ್ಲ (ನಾರದ ಭಕ್ತಿ ಸೂತ್ರ,೧.೭). ಭಕ್ತನು ತನ್ನ ಪ್ರೀತಿ ಹಾಗೂ ಶರಣಾಗತಿಯ ಭಾವದಿಂದ ತನ್ನ ಇಚ್ಛಾಶಕ್ತಿಯನ್ನು ದೇವರ ಇಚ್ಛಾಶಕ್ತಿಯೊಡನೆ ಲಯಗೊಳಿಸುವನು. ಇದು ಅಪ್ರಯತ್ನವಾಗಿಯೇ ತನ್ನ ಸ್ವಂತ ಇಚ್ಛಾಶಕ್ತಿಯನ್ನು ಆಸೆಗಳಿಂದ ಪ್ರತ್ಯೇಕಿಸುವುದು. ಈ ಮಾರ್ಗದಲ್ಲೂ ಸಾಧಕನ ಆಧ್ಯಾತ್ಮಿಕ ಬೆಳವಣಿಗೆಯನ್ನು ಅನುಸರಿಸಿ ಮೂರು ದೃಷ್ಟಿಕೋನಗಳಿರುವ ಸಾಧ್ಯತೆಯಿದೆ.

ಮೊದಲನೆಯದೇ ದ್ವೈತಭಾವದ ಹಂತ. ಈ ಹಂತದಲ್ಲಿ ಸಾಧಕನು ತನ್ನನ್ನು ಕರ್ತೃ ಎಂದು ತಿಳಿಯದೆ ವಿಧಿಯಿಲ್ಲ. ಮಿಗಿಲಾಗಿ, ತಾನು ಮಾಡುವ ಕರ್ಮಗಳನ್ನು (ವಿಶೇಷವಾಗಿ ಪ್ರಾಪಂಚಿಕ ಕರ್ಮ) ಭಗವಂತನ ಪೂಜೆಯೆಂದು ಭಾವಿಸಲಾರ. ಕೆಲಸದ ಪ್ರಾರಂಭ ಹಾಗೂ ಅಂತ್ಯದಲ್ಲಿ ಶರಣಾಗತ ಭಾವದಿಂದ ಕರ್ಮಫಲವನ್ನು ಭಗವಂತನ ಪಾದಪದ್ಮಗಳಲ್ಲಿ ಅರ್ಪಿಸುವುದೊಂದೇ ಆತನಿಂದ ಮಾಡಲು ಸಾಧ್ಯ. ಕೆಲಸದ ಮಧ್ಯದಲ್ಲೂ ಭಗವಂತನನ್ನು ಸ್ಮರಿಸಿ ಕರ್ಮಫಲವನ್ನು ಅರ್ಪಿಸಲು ಆತನು ಪ್ರಯತ್ನಿಸಬಹುದು. ಅಧಿಕಾಂಶ ಸಾಧಕರು ತಾವು ಈ ಹಂತದಲ್ಲಿರುವುದನ್ನು ಗಮನಿಸುವರು. ಅಂತಹವರ ವಿಷಯದಲ್ಲಿ ಕರ್ಮ ಮತ್ತು ಪೂಜೆ ಜೊತೆಜೊತೆಯಲ್ಲೇ ಹೋಗುವುವು.

ಎರಡನೆಯದೇ ಉನ್ನತ ದ್ವೈತ ಅಥವಾ ವಿಶಿಷ್ಟಾದ್ವೈತದ ಹಂತ. ಈ ಹಂತದಲ್ಲಿ ಸಾಧಕನು ಭಗವಂತನು "ಅಂತರ್ಯಾಮಿ" ಎಂಬುದನ್ನು ಅರಿಯುವನು. ಆತನು ಭೋಕ್ತೃತ್ವದ ಭಾವವನ್ನು ತ್ಯಜಿಸಿರುವನು. ಆದರೆ ತಾನು ಅಂತರ್ಯಾಮಿಯ ಅಧೀನದಲ್ಲಿರುವೆನು ಎಂದು ಭಾವಿಸಿದರೂ ಕೂಡ ಕರ್ತೃತ್ವದ ಭಾವವನ್ನು ತ್ಯಜಿಸಲಾಗಿರುವುದಿಲ್ಲ. ಈಗ ಆತನು ಎಲ್ಲ ಕೆಲಸಗಳಲ್ಲೂ ಪೂಜ್ಯ ಭಾವನೆಯನ್ನು ಇರಿಸಿ ಕರ್ಮವನ್ನೇ ಪೂಜೆಯನ್ನಾಗಿ ಮಾಡುವ ಸಾಮರ್ಥ್ಯ ಗಳಿಸಿರುತ್ತಾನೆ.

ಮೂರನೆಯದೇ ಅದ್ವೈತಭಾವದ ಹಂತ. (ಆದರೆ ಇದು ಶ್ರೀ ಶಂಕರರ ಅದ್ವೈತವಲ್ಲ.) ಈ ಹಂತದಲ್ಲಿ ಸಾಧಕನು ಎಲ್ಲೆಡೆಯಲ್ಲೂ ಭಗವಂತನನ್ನೇ ಕಾಣುವನು. ಪ್ರತಿಯೊಂದು ಜೀವಿಯು ಭಗವಂತನ ಆವಿರ್ಭಾವದಂತೆ ಕಾಣುವುದು. ಎಲ್ಲ ಕರ್ಮಗಳೂ ಪೂಜೆಯೇ. ತಾನು ಕೆಲಸ ಮಾಡುತ್ತಿರುವನೆಂಬ ಭಾವವೇ ಇಲ್ಲದಿರುವುದರಿಂದ ಕರ್ಮದ ಪ್ರಶ್ನೆಯೇ ಇಲ್ಲಿ ಏಳುವುದಿಲ್ಲ. ಎಲ್ಲ ಚಲನೆಗಳೂ ಕೇವಲ ಪೂಜೆಯಂತೆ ನಡೆಯುತ್ತಿರುವುದೆಂದು ಕಾಣುವನು. ಇನ್ನು ಆತನು ಮಾನವನಲ್ಲಿ ದೇವರನ್ನು ಪೂಜಿಸುವುದಿಲ್ಲ, ಮಾನವನನ್ನೇ ಬ್ರಹ್ಮವೆಂದು ಪೂಜಿಸುತ್ತಾನೆ. ಈ ಅತ್ಯುನ್ನತ ಕರ್ಮಯೋಗವು ಆಧುನಿಕ ಯುಗದ ಆದರ್ಶವೆಂದು ಸ್ವಾಮಿ ವಿವೇಕಾನಂದರು ಪ್ರಪಂಚದ ಮುಂದಿರಿಸಿದ್ದಾರೆ. ಇದು ನಿಜವಾಗಿಯೂ ಅತ್ಯಂತ ಉನ್ನತ ಮಟ್ಟದ ಆದರ್ಶ. ಆದರೆ ಇದನ್ನು ಕೇವಲ ಉನ್ನತ ಪ್ರಜ್ಞಾಸ್ತರದಲ್ಲಿರುವವರು ಮಾತ್ರವೇ ಅಭ್ಯಾಸ ಮಾಡಬಲ್ಲರು.

### ಕರ್ಮ ಮತ್ತು ಪ್ರಪತ್ತಿ

ಇಲ್ಲಿಯವರೆಗೂ ವಿವರಿಸಿದ ಕರ್ಮಯೋಗಗಳೆಲ್ಲವೂ ಹೆಚ್ಚು ಕಡಿಮೆ ಶಾಂತವಾದ ಜೀವನವನ್ನು ನಡೆಸುತ್ತಿರುವವರಿಗೆ ಅನ್ವಯಿಸುತ್ತದೆ. ಅಂತಹವರು ದೇವರನ್ನು ಒಂದು ಕೈಯಲ್ಲಿ ಹಾಗೂ ಕೆಲಸವನ್ನು ಮತ್ತೊಂದು ಕೈಯಲ್ಲಿ ಹಿಡಿದಿರುತ್ತಾರೆ. ಆದರೆ ಹೀಗೆ ಮಾಡಲು ಸಾಧ್ಯವಾಗದ ಅನೇಕರು ಇರುವರು. ಜೀವನದಲ್ಲಿ ದುಃಖ ಹಾಗೂ ನೋವಿನ ಹೊಡೆತಗಳಿಗೆ ಸಿಲುಕಿರುವುದರಿಂದಲೊ ಅಥವಾ ಭಗವಂತನ ಸಾಕ್ಷಾತ್ಕಾರಕ್ಕಾಗಿ ತೀವ್ರ ವ್ಯಾಕುಲತೆಯಿಂದ ಅವರ ಮನಸ್ಸು ಉದ್ರೇಕಗೊಂಡಿರುವುದರಿಂದಲೊ ಅವರು ಕರ್ಮದ ಕಡೆ ಹೆಚ್ಚು ಗಮನವೀಯಲಾರರು. ಅಂತಹವರಿಗೆ ಶಾಸ್ತ್ರಗಳು ಪ್ರಪತ್ತಿ ಅಥವಾ ಶರಣಾಗತಿಯ ಮಾರ್ಗವನ್ನು ಬೋಧಿಸುವುವು. ಅವರು ಕರ್ಮದ ಬಗ್ಗೆ ತಲೆ ಕೆಡಿಸಿಕೊಳ್ಳಬೇಕಾಗಿಲ್ಲ. ತಮ್ಮ ಕೆಲಸವನ್ನು ಹೇಗೆ ಬೇಕಾದರೂ ಮಾಡಬಹುದು. ಅವರು ಎರಡೂ ಕೈಗಳಿಂದ ಭಗವಂತನನ್ನು ಹಿಡಿಯಬೇಕು ಮತ್ತು ಕರ್ಮವು ತನ್ನಷ್ಟಕ್ಕೆ ತಾನೇ ನಡೆಯುತ್ತದೆ. ಅವರಿಗೆ ಬೇರೆ ಮಾರ್ಗಗಳು ಅಸಾಧ್ಯವಾದುದರಿಂದ ಪ್ರಾಮಾಣಿಕವಾಗಿ ಅವರು ಇದನ್ನು ಮಾಡಿದಾಗ, ಆಧ್ಯಾತ್ಮಿಕ ಪ್ರಪಂಚದ ನಿಗೂಢ ನಿಯಮಗಳಿಗನುಸಾರವಾಗಿ ಅವರ ಕೆಲಸಗಳು ಸುಸೂತ್ರವಾಗಿ ನಡೆಯುವುವು ಹಾಗೂ ಭಗವಂತನನ್ನು ಕುರಿತು ಚಿಂತಿಸಲು ಹೆಚ್ಚು ಸ್ವಾತಂತ್ರ್ಯ ದೊರೆಯುವುದು. ಈ ಮಾರ್ಗದಲ್ಲಿ ಕೇವಲ ಭಗವಂತನ ಕೃಪೆಯೇ ಹೊರತು ಪುರುಷ ಪ್ರಯತ್ನಕ್ಕೆ ಸ್ಥಾನವೇ ಇಲ್ಲ.

**ಮಕ್ಕಳಿಗೆ ಎಲ್ಲವೂ ಒಂದು ಆಟ, ಆದರೆ ಪ್ರೌಢರಿಗೆ ಆಟವೂ ಒಂದು ಕೆಲಸವೇ.**

## ದೈವೀಲೀಲೆಯಲ್ಲಿ ಕರ್ಮದ ಪಾತ್ರ

ಕರ್ಮಯೋಗವನ್ನು ಅಭ್ಯಸಿಸಲು ಮತ್ತೊಂದು ಮಾರ್ಗವಿದೆ. ಸಂಪೂರ್ಣ ಜೀವನವೆ ಒಂದು ಲೀಲೆ ಅಥವಾ ದೇವರ ಆಟ ಎಂದು ಪರಿಗಣಿಸಿ, ಎಲ್ಲ ಕರ್ಮಗಳನ್ನೂ, ತಾವು ವಿಶ್ವ ಕ್ರೀಡೆಯಲ್ಲಿ ಭಾಗವಹಿಸುತ್ತಿರುವುದಾಗಿ ತಿಳಿದು, ಸ್ವೀಕರಿಸುವುದು. ಮಕ್ಕಳಿಗೆ ಎಲ್ಲವೂ ಒಂದು ಆಟ, ಆದರೆ ಪ್ರೌಢರಿಗೆ ಆಟವೂ ಒಂದು ಕೆಲಸವೇ. ಜ್ಞಾನಿಗಳು ಮಕ್ಕಳ ಮುಗ್ಧತೆ ಹಾಗೂ ಸಹಜತೆಯನ್ನು ಉಳಿಸಿಕೊಂಡು ಪ್ರಪಂಚವನ್ನೆಲ್ಲ ಒಂದು ಆಟದ ಮೈದಾನವೆಂದು ಪರಿಗಣಿಸಿ ನೋವು, ನಲಿವು, ಸುಖ, ದುಃಖ, ಜೀವನ್ಮರಣಗಳನ್ನು ದೈವಲೀಲೆಯ ಒಂದು ಅಂಶವೆಂದು ಪರಿಗಣಿಸುವರು. ಇಂತಹ ಕಿಂಚಿತ್ ಭಾವವೂ ಎಲ್ಲರ ಜೀವನವನ್ನು ಮತ್ತಷ್ಟು ಸುಖಕರವೂ, ಮಧುರವೂ ಆಗಿ ಮಾಡುತ್ತದೆ ಮತ್ತು ಸೌಂದರ್ಯ ಹಾಗೂ ಜೀವನಾರ್ಥದ ಹೊಸ ಬೆಳಕನ್ನು ನೀಡುತ್ತದೆ.

## ಉಪಸಂಹಾರ

ಈಗ ನಾವು ಕರ್ಮದ ಬಗೆಗಿನ ಈ ಸುದೀರ್ಘ ಚರ್ಚೆಯನ್ನು ಆಧುನಿಕ ಯುಗಕ್ಕೆ ಅನ್ವಯಿಸುತ್ತ ಮುಕ್ತಾಯ ಮಾಡೋಣ. ಆಧುನಿಕ ಯುಗದಲ್ಲಿ ಜನಸಂಖ್ಯೆಯ ವೃದ್ಧಿ, ಕೈಗಾರಿಕೋದ್ಯಮ, ನಗರೀಕರಣ ಮತ್ತು ಸಾಮಾಜಿಕ-ರಾಜಕೀಯ ಬದಲಾವಣೆಗಳು ಕರ್ಮವನ್ನು ಒಂದು ಅನಿವಾರ್ಯ ಆವಶ್ಯಕತೆಯನ್ನಾಗಿ ಮಾಡಿವೆ. ವಿಜ್ಞಾನ ಮತ್ತು ಮುಕ್ತ ಚಿಂತನೆಗಳು ತನ್ನ ಹಾಗೂ ಪ್ರಪಂಚದ ಬಗ್ಗೆ ಮಾನವನ ದೃಷ್ಟಿಕೋನವನ್ನು ಬದಲಾಯಿಸಿವೆ ಹಾಗೂ ಅನುಭವಗಳ ಮತ್ತು ಚಿಂತನೆಗಳ ಹೊಸ ಬಾಗಿಲನ್ನೇ ತೆರೆದಿವೆ. ಎಲ್ಲೆಡೆಯಲ್ಲಿಯೂ ಹೆಂಗಸರೂ ಗಂಡಸರೂ ಆರ್ಥಿಕ, ಸಾಮಾಜಿಕ ಹಾಗೂ ಧಾರ್ಮಿಕ ಶೋಷಣೆಯಿಂದ ಮುಕ್ತರಾಗಲು ಪ್ರಯತ್ನಿಸುತ್ತಿರುವರು. ಅದೇ ಸಮಯದಲ್ಲಿ ಆಧುನಿಕ ಜೀವನವು ನಮ್ಮನ್ನು ಮೂಲ ಸಂಸ್ಕೃತಿ ಹಾಗೂ ಧಾರ್ಮಿಕ ಭಾವನೆಗಳಿಂದ ಅನಾಥಗೊಳಿಸಿ ನಮ್ಮಲ್ಲಿ ಅತೃಪ್ತಿ, ಭಿನ್ನಾಭಿಪ್ರಾಯ, ದ್ವೇಷಗಳ ಬೀಜವನ್ನು ಬಿತ್ತಿದೆ. ಇದು ಆಧ್ಯಾತ್ಮಿಕ ಅನುಸರಣೆಯ ಆವಶ್ಯಕತೆಯನ್ನು ಮತ್ತಷ್ಟು ಹೆಚ್ಚಿಸಿದೆ.

ಮತ್ತೊಂದು ವಿಧದಲ್ಲಿ ಆಧ್ಯಾತ್ಮಿಕ ಜೀವನದಲ್ಲೂ ಕೆಲಸವು ಹೆಚ್ಚು ಮಹತ್ವವನ್ನು ಪಡೆದಿದೆ. ಜೀವನವನ್ನು ನಿರ್ವಹಿಸಲು ತಾನೇ ದುಡಿಯಬೇಕಾದುದರಿಂದಲೂ ಸಾಮಾಜಿಕ ಪ್ರಜ್ಞೆ ಮತ್ತು ಜವಾಬ್ದಾರಿಗಳು ಹೆಚ್ಚುತ್ತಿರುವುದರಿಂದಲೂ ಆಧುನಿಕ ಮಾನವನು ಪೂರ್ಣಾವಧಿ ಧ್ಯಾನ ಮತ್ತು ಏಕಾಂತ ಜೀವನವನ್ನು ನಡೆಸಲಾರ. ಒಂದು ವೇಳೆ ಅದು ಸಾಧ್ಯವಾದರೂ, ವೇದಾಂತದ ಆಚಾರ್ಯರು ಕರ್ಮಯೋಗವನ್ನು ಆಧ್ಯಾತ್ಮಿಕ ಜೀವನದ ಅನಿವಾರ್ಯವಾದ ಮೊದಲ ಹೆಜ್ಜೆ ಎಂದು ಗುರುತಿಸಿದ್ದಾರೆ. ಅಧ್ಯಾತ್ಮ ಸಾಧನೆಯ ಪ್ರಾರಂಭಿಕನಿಗೆ, ತಾನು ಮೀರಿಹೋಗಬೇಕಾದ ತನ್ನ ಹಿಂದಿನ ದರೊಡನೆ ಕರ್ಮಯೋಗವು ಸಂಬಂಧವನ್ನು ಕಲ್ಪಿಸುತ್ತದೆ ಮತ್ತು ಸಮಾಜಕ್ಕೆ ಉಪಯುಕ್ತವಾಗುವ ಸೃಜನಾತ್ಮಕ ಕ್ರಿಯೆಗಳ ಮೂಲಕ ತನ್ನ ಅತಿಯಾದ ರಾಜಸಿಕ ಶಕ್ತಿಯನ್ನು ಉಪಯೋಗಿಸಲು ಸಹಾಯಕವಾಗುತ್ತದೆ. ಸೃಜನಾತ್ಮಕ ಪ್ರವೃತ್ತಿಯನ್ನು ಹತ್ತಿಕ್ಕಿದರೆ ಅವು ಚಿಂತೆ, ಭ್ರಾಂತಿ, ಚಂಚಲತೆಗಳನ್ನು ಉಂಟುಮಾಡುವ ಸಾಧ್ಯತೆಯಿದೆ. ಆದರೆ ಅದನ್ನು ಸ್ವಾರ್ಥ ಕಾರ್ಯಗಳಲ್ಲಿ ಪ್ರಕಟಗೊಳಿಸಿದರೆ ಅದರ ಫಲಿತಾಂಶ ಇಚ್ಛಾಶಕ್ತಿಯ ನಷ್ಟ. ಸ್ವಾರ್ಥಪರವಾದ ಕರ್ಮಗಳು ನಮ್ಮ ಶಕ್ತಿಯನ್ನು ಕುಂದಿಸುತ್ತವೆ. ಆದರೆ ಯಾವುವು ನಿಃಸ್ವಾರ್ಥ ಕಾರ್ಯಗಳೋ ಅವು ಖಂಡಿತವಾಗಿ ಮನಸ್ಸಿಗೆ ಹೊಸ ಶಕ್ತಿಯನ್ನು ನೀಡುವುವು, ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ (ಕೃತಿಶ್ರೇಣಿ, ೧.೩೫).

ಎಲ್ಲಕ್ಕೂ ಮಿಗಿಲಾಗಿ, ಹೇಗೆ ಯಂತ್ರವು ಕೆಲಸ ಮಾಡುವಾಗಲೇ ಅದರ ನ್ಯೂನತೆಗಳು ತಿಳಿದು ಬರುವುವೋ ಹಾಗೆಯೇ ಗುಪ್ತವಾಗಿ ಅಡಗಿರುವ ಭಾವೋದ್ರೇಕಗಳು, ಅಹಂಕಾರ ಮತ್ತಿತರ ಚಾರಿತ್ರ್ಯದಲ್ಲಿನ ನ್ಯೂನತೆಗಳನ್ನು ಕೇವಲ ಕರ್ಮದ ಮೂಲಕವೇ ಪತ್ತೆ ಹಚ್ಚಿ ಸರಿಪಡಿಸಿಕೊಳ್ಳಬಹುದು. ಗಮನಿಸಬೇಕಾದ ಮತ್ತೊಂದು ಅಂಶವೆಂದರೆ, ಪ್ರತಿಯೊಂದು ಕರ್ಮವೂ ಸ್ವಲ್ಪ ಕೆಡುಕಿನಿಂದ ಕೂಡಿರುತ್ತದೆ. ಸ್ವಾಮೀಜಿಯವರು ಹೇಳಿದಂತೆ "ನಾವು ತಿನ್ನುವ ಪ್ರತಿಯೊಂದು ಅನ್ನದ ತುತ್ತೂ ಮತ್ತಾರ ಬಾಯಿಂದಲೋ ಕಸಿದುಕೊಂಡದ್ದೇ ಆಗಿರುತ್ತದೆ." ಆದ್ದರಿಂದಲೇ ನಾವು ನಮ್ಮ ಕಾರ್ಯಗಳಲ್ಲಿನ ಕೆಟ್ಟ ಫಲವನ್ನು ನಾಶಗೊಳಿಸಲು ಸದಾ ಇತರರಿಗೆ ಒಳಿತನ್ನೇ ಮಾಡುತ್ತಿರಬೇಕು, ಒಳಿತನ್ನೇ ಬಯಸಬೇಕು. ಜೀವನವಾದರೋ ಸಂಪೂರ್ಣ ಅನಿಶ್ಚಿತತೆಗಳಿಂದ ಕೂಡಿದೆ ಮತ್ತು ಸ್ವಾರ್ಥೋದ್ದೇಶದಿಂದ ನಾವೆಸಗುವ ಕೆಲಸಗಳು ನಾವೆಣಿಸಿದ ಫಲವನ್ನು ನೀಡದೆ ಇನ್ನೂ ಹೆಚ್ಚಿನ ಬಂಧನ ಹಾಗೂ ದುಃಖಕ್ಕೀಡು ಮಾಡುತ್ತವೆ. ಆದರೆ ನಿಃಸ್ವಾರ್ಥ ಕರ್ಮ ನಮ್ಮ ಅಹಂಕಾರವನ್ನು ತಗ್ಗಿಸಿ, ಮನಸ್ಸನ್ನು ನಿರ್ಮಲಗೊಳಿಸುತ್ತದೆ. ಆದ್ದರಿಂದ ಕರ್ಮಯೋಗವು ಆಧ್ಯಾತ್ಮಿಕ ಸಾಧಕರ ಜೀವನದಲ್ಲಿ ಹೆಚ್ಚಿನ ಮಹತ್ವವನ್ನು ಪಡೆಯುತ್ತದೆ.

ಆದರೆ ಆಧುನಿಕ ಮಾನವನು ಎದುರಿಸುತ್ತಿರುವ ಎರಡು ಸಮಸ್ಯೆಗಳೆಂದರೆ: ಹೇಗೆ ಕೆಲಸದಲ್ಲಿ ಆನಂದ ಹಾಗೂ ಸಫಲತೆಯನ್ನು ಕಾಣುವುದು ಮತ್ತು ಕೆಲಸವನ್ನು ಆಧ್ಯಾತ್ಮಿಕ ಸಫಲತೆಯನ್ನು ಪಡೆಯುವ ಸಾಧನವನ್ನಾಗಿ ಮಾರ್ಪಡಿಸುವುದು.

ತನ್ನ ರಚನಾತ್ಮಕ ಶಕ್ತಿಯನ್ನು ವ್ಯಕ್ತಗೊಳಿಸಲು ಸಾಧ್ಯವಾದಾಗಲೇ ಒಬ್ಬಾತನು ತನ್ನ ಕೆಲಸದಿಂದ ಆನಂದವನ್ನು



3

ಪಡೆಯಲು ಸಾಧ್ಯ. ವ್ಯಕ್ತಿ ತನ್ನ ಪ್ರವೃತ್ತಿಗೆ ಅನುರೂಪವಾದ ಕೆಲಸವನ್ನು ಆರಿಸಿಕೊಳ್ಳುವ ಸ್ವಾತಂತ್ರ್ಯ ದೊರೆತಾಗಲೇ ಇದು ಸಾಧ್ಯ. ಪ್ರತಿಯೊಂದು ಕೆಲಸವೂ ಆರ್ಥಿಕ ಹಾಗೂ ಸಾಮಾಜಿಕ ಭದ್ರತೆಯನ್ನು ನೀಡಿದಾಗಲೇ ತನ್ನ ಪ್ರವೃತ್ತಿಯಂತೆ ಕೆಲಸವನ್ನು ಆರಿಸಿಕೊಳ್ಳುವ ಸ್ವಾತಂತ್ರ್ಯ ದೊರೆಯುವುದು. ಇದೇ ಮಾರ್ಕ್ಸ್‌ವಾದಿಗಳ ಮೂಲ ಸಿದ್ಧಾಂತ. ಇದರ ಸಾಮಾಜಿಕ ಹಾಗೂ ರಾಜಕೀಯ ದುಷ್ಪರಿಣಾಮಗಳನ್ನು ದೂರಮಾಡಿ ಈ ಸಿದ್ಧಾಂತವನ್ನು ಅಳವಡಿಸಿಕೊಂಡದ್ದರಿಂದಲೇ ಪಾಶ್ಚಾತ್ಯ ದೇಶಗಳು ಆರ್ಥಿಕ ಔನ್ನತ್ಯವನ್ನು ಸಾಧಿಸಿದವು. ಆದರೆ ನಿಯಂತ್ರಿಸಲಾಗದ ಜನಸಂಖ್ಯೆಯ ವೃದ್ಧಿ ಹಾಗೂ ಕೋಟ್ಯಂತರ ಜನ ತೀವ್ರ ಬಡತನದಲ್ಲಿ ತೊಳಲುತ್ತಿರುವ ಈ ಭಾರತದೇಶದಲ್ಲಿ ತನ್ನಿಚ್ಛೆಯ ಕೆಲಸವನ್ನು ಆರಿಸಿಕೊಳ್ಳುವ ಸ್ವಾತಂತ್ರ್ಯ ದೊರಕುವುದು ಸಾಧ್ಯವಿಲ್ಲ.

> ಜೀವನವನ್ನು ಅದು ಇರುವ ಹಾಗೇ ಸ್ವೀಕರಿಸಬೇಕು ಹಾಗೂ ನಿಗೂಢವಾದ ಜೀವನದ ಶಕ್ತಿ ಮತ್ತು ರಹಸ್ಯಗಳಿಗೆ ತನ್ನನ್ನು ಮುಕ್ತವಾಗಿ ತೆರೆದುಕೊಳ್ಳಬೇಕು.

ಆದರೆ ಸಮಾಜದ ಪರಿಸ್ಥಿತಿ ಹೇಗಾದರೂ ಇರಲಿ, ಹಾಗೂ ಒಬ್ಬಾತ ತಾನು ಮಾಡುವ ಕೆಲಸ ಯಾವುದೇ ಆಗಿರಲಿ, ಆಧ್ಯಾತ್ಮಿಕ ದಿಕ್ಸೂಚಿಯಿಲ್ಲದ ಕೆಲಸವು ಬದುಕಿಗೆ ಯಾವುದೇ ಅರ್ಥವನ್ನು ನೀಡಲಾರದು ಎಂಬ ಮನವರಿಕೆ ಪ್ರತಿಯೊಬ್ಬರಿಗೂ ಒಂದಲ್ಲ ಒಂದು ದಿನ ಆಗಿಯೇ ಆಗುತ್ತದೆ. ಈಗ ಅವಶ್ಯಕವಾಗಿರುವುದೆಂದರೆ ಪ್ರಾಪಂಚಿಕ ಹಾಗೂ ಆಧ್ಯಾತ್ಮಿಕ ಕೆಲಸಗಳೆರಡನ್ನೂ ಒಂದುಗೂಡಿಸುವ ಮತ್ತು ಅಸ್ತಿತ್ವದ ವಿವಿಧ ಸ್ತರಗಳಲ್ಲಿರುವ ಮನುಷ್ಯರ ಆಂತರಿಕ ಆತ್ಮಶಕ್ತಿಯನ್ನು ಪ್ರಕಾಶಗೊಳಿಸಿ ಸಫಲತೆಯಿಂದ ಸಫಲತೆಗೆ ಒಯ್ಯುವ ಒಂದು ಕರ್ಮಸಂಹಿತೆ. ಇದು ಜೀವನದ ಏಕತೆ, ಆತ್ಮನ ದಿವ್ಯತೆ, ಅನುಭವದ ವಿವಿಧ ಸ್ತರಗಳಲ್ಲಿ ಹಾಗೂ ಆಧ್ಯಾತ್ಮಿಕ ವಿಕಾಸದಲ್ಲಿ ಕೆಲಸದ ಮಹತ್ವ—ಇವುಗಳನ್ನೊಳಗೊಂಡ ಒಂದು ಸಮಗ್ರ ಜೀವನ ದರ್ಶನವನ್ನು ಅಪೇಕ್ಷಿಸುತ್ತದೆ.

ಸ್ವಾಮಿ ವಿವೇಕಾನಂದರು ಮಾಡಿದ ಅತ್ಯಂತ ಮಹತ್ವಪೂರ್ಣವಾದ ಕಾರ್ಯವೆಂದರೆ ಪೂರ್ವ ಮತ್ತು ಪಶ್ಚಿಮ ಹಾಗೂ ಪ್ರಾಚೀನ ಮತ್ತು ಆಧುನಿಕ ಕಾಲಗಳಲ್ಲಿನ ಸರ್ವೋತ್ಕೃಷ್ಟ ಭಾವನೆಗಳನ್ನೆಲ್ಲ ಒಂದುಗೂಡಿಸಿದುದು. ಅವರ ಉದ್ದೇಶ ಕೇವಲ ಆಧುನಿಕ ಕಾಲದ ಅವಶ್ಯಕತೆಗಳಲ್ಲಿನ ರೂಪರೇಷೆಗಳನ್ನು ಗುರುತಿಸಿ, ಒಂದು ಉದಾತ್ತವಾದ ಚೌಕಟ್ಟನ್ನು ನಿರ್ಮಿಸುವುದಾಗಿತ್ತೇ ಹೊರತು ಎಲ್ಲರಿಗೂ ಒಂದೇ ಅಳತೆಯ ಅಂಗಿಯನ್ನು ತೊಡಿಸುವುದಾಗಿರಲಿಲ್ಲ. ಸತ್ಯ ಅಥವಾ ಅಸ್ತಿತ್ವವು ಮಾನವನ ಆತ್ಮದ ಅವಿಭಾಜ್ಯ ಅಂಗ ಹಾಗೂ ಮಾನವನ ಸ್ವಭಾವದಲ್ಲಿ ಅನಂತ ತಾರತಮ್ಯಗಳಿರುವ ಕಾರಣ, ಪ್ರತಿಯೊಬ್ಬನೂ ತನ್ನೊಳಗೇ ಇರುವ ಸತ್ಯದ ಬೆಳವಣಿಗೆಗೆ ತನ್ನದೇ ಆದ ಒಂದು ನಿಯಮವನ್ನು ಆರಿಸಿಕೊಳ್ಳುವ ಸ್ವಾತಂತ್ರ್ಯವಿರಬೇಕೆಂದು ಅವರಿಗೆ ತಿಳಿದಿತ್ತು. ಆದ್ದರಿಂದಲೇ ಅವರು, "ಯಾವ ವ್ಯಕ್ತಿಯೂ ಒಂದು ಧರ್ಮಕ್ಕೆ ಹುಟ್ಟಿಲ್ಲ; ತನ್ನ ಆತ್ಮನಲ್ಲೇ ಒಂದು ಧರ್ಮವಿದೆ" ಎಂದರು. ಪ್ರತಿಯೊಬ್ಬನೂ ತನ್ನದೇ ಆದ ಒಂದು ಜೀವನಸೂತ್ರವನ್ನು ಗುರುತಿಸಿಕೊಳ್ಳಬೇಕು. ಅಥವಾ ಸ್ವಾಮೀಜಿಯವರ ಮಾತುಗಳಲ್ಲಿ, ಪ್ರತಿಯೊಬ್ಬರೂ ತಮ್ಮ ಧರ್ಮವನ್ನು ತಾವೇ ಕಂಡುಹಿಡಿದುಕೊಳ್ಳಬೇಕು.

ಈ ದಿಕ್ಕಿನಲ್ಲಿ ಮೊದಲ ಹೆಜ್ಜೆಯೆಂದರೆ ಜೀವನವನ್ನು ಅದು ಇರುವ ಹಾಗೆ ಸ್ವೀಕರಿಸುವುದು ಹಾಗೂ ನಿಗೂಢವಾದ ಜೀವನದ ಶಕ್ತಿ ಮತ್ತು ರಹಸ್ಯಗಳಿಗೆ ತನ್ನನ್ನು ಮುಕ್ತವಾಗಿ ತೆರೆದುಕೊಳ್ಳುವುದು. "ಪ್ರಪಂಚ ಯಂತ್ರವೆಂಬ ಚಕ್ರದ ಗಾಲಿ ಗಳಿಂದ ತಪ್ಪಿಸಿಕೊಂಡು ಓಡಬೇಡಿ. ಬದಲಾಗಿ ಅದರೊಳಗೆ ನಿಂತು ಕರ್ಮದ ರಹಸ್ಯವನ್ನು ಅರಿಯಿರಿ. ಸರಿಯಾದ ರೀತಿಯಲ್ಲಿ ಆ ಯಂತ್ರದಲ್ಲಿ ನೆಲೆಯೂರಿ ಕೆಲಸಮಾಡುವುದರಿಂದ ಮಾತ್ರವೇ ಅದರಿಂದ ಹೊರಗೆ ಬರುವ ತಂತ್ರ ತಿಳಿಯುತ್ತದೆ" ಎಂಬ ಸ್ವಾಮಿ ವಿವೇಕಾನಂದರ ನುಡಿಗಳು ಅವರು ನೀಡಿರುವ ಕರ್ಮದ ವ್ಯಾಖ್ಯೆಗೆ ಕನ್ನಡಿ ಹಿಡಿದಂತಿವೆ.

(ಮುಗಿಯಿತು)

### ಕಾಂಚನ ತ್ಯಾಗ

ಸ್ವಾಮಿ ಅಖಂಡಾನಂದರು ಶ್ರೀರಾಮಕೃಷ್ಣರ ಸಂನ್ಯಾಸೀ ಭಕ್ತರು, ಶಿಷ್ಯರು. ೧೮೯೧ರಲ್ಲಿ ಎಂದು ಕಾಣುತ್ತದೆ. ಸ್ವಾಮಿಗಳು ದೇಶಾಟನೆ ಮಾಡುತ್ತಾ ದೆಹಲಿಯಲ್ಲಿದ್ದರು. ಯಾರೂ ಪರಿಚಿತರು ಇಲ್ಲ. ಒಂದು ಉದ್ಯಾನದಲ್ಲಿನ ಒಂದು ಆಸನದಲ್ಲಿ ಕುಳಿತುಕೊಂಡು ಯೋಚಿಸುತ್ತಿದ್ದರು: "ನಮ್ಮ ಠಾಕೂರರ ಭಕ್ತರು ಯಾರಾದರೂ ಸಿಕ್ಕಿದರೆ ಅವರ ಮನೆಗೆ ಹೋಗುತ್ತೇನೆ, ಇಲ್ಲದಿದ್ದರೆ ರಾತ್ರಿ ಇಲ್ಲಿಯೇ ಕಳೆಯುತ್ತೇನೆ." ಆ ಆಸನದ ಇನ್ನೊಂದು ತುದಿಯಲ್ಲಿ ಒಬ್ಬ ಮಾರವಾಡಿ ಸಜ್ಜನ. ಆತನು ಸ್ವಾಮಿ ಅಖಂಡಾನಂದರಿಗೆ ನಮಸ್ಕರಿಸಿ ಅವರಿಗೆ ಪ್ರಣಾಮಿ ಎಂದು ಹಣ ಕೊಟ್ಟ. ಸ್ವಾಮಿಗಳು ಹಣ ನಿರಾಕರಿಸಿದರು. ಆಶ್ಚರ್ಯದಿಂದ ಆ ಮಾರವಾಡಿ ಉದ್ಗರಿಸಿದ : "ನಾನು ಲೋಕದಲ್ಲಿ ಒಬ್ಬರೇ ಮಹಾತ್ಮರನ್ನು ಕಂಡಿದ್ದೆ—ದಕ್ಷಿಣೇಶ್ವರದ ರಾಮಕೃಷ್ಣ ಪರಮಹಂಸರು. ಅವರು ಸಂಪೂರ್ಣ ಕಾಂಚನತ್ಯಾಗ ಮಾಡಿದ್ದರು. ಈಗ ನೀವು ಹಣ ಬೇಡವೆನ್ನುತ್ತೀರಿ!" ಸ್ವಾಮಿ ಅಖಂಡಾನಂದರು ನೀವು ಯಾರು, ಎತ್ತ ಎಂದು ವಿಚಾರಿಸಿದರು. ಆ ಮಾರವಾಡಿಯ ಹೆಸರು ಲಕ್ಷ್ಮೀನಾರಾಯಣ. ಆತ ಶ್ರೀರಾಮಕೃಷ್ಣರಿಗೆ ಹತ್ತುಸಾವಿರ ಕೊಡುವೆನೆಂದಾಗ ಅವರು ನಿರಾಕರಿಸಿದ್ದರು. ಶ್ರೀಮಾತೆ ಶಾರದಾದೇವಿಯವರೂ ಅದು ಬೇಡ, ಎಂದರು. ಇದರಿಂದ ದುಃಖಿತನಾದವನು ಹೃದಯ (ದೇವಸ್ಥಾನದಲ್ಲಿ ಪೂಜೆಗಾಗಿ ನೇಮಿತನಾಗಿದ್ದ ಶ್ರೀರಾಮಕೃಷ್ಣರ ಸೋದರಳಿಯ)ನೊಬ್ಬನೇ! ಸ್ವಾಮಿ ಅಖಂಡಾನಂದರು ಹೀಗೆ ಒಬ್ಬ ರಾಮಕೃಷ್ಣಭಕ್ತರ ಸಂಯೋಗವಾಗಿ ಸಂತಸಪಟ್ಟರು. ತಮ್ಮ ಪರಿಚಯ ಹೇಳಿ ಆತನ ಅತಿಥಿಯಾಗಿರಲು ಸಂತೋಷದಿಂದ ಒಪ್ಪಿದರು.